# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಹೊಂಬೇಗೌಡ ನಗರ ವಾರ್ಡ್-145 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು ಶ್ರೀಮತಿ.ಲಕ್ಷ್ಮೀದೇವಿ ಉಪ ಆಯುಕ್ತರು ಕಂದಾಯ(ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:-08.02.2021 ರಂದು ಸೋಮವಾರ ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು **ತೆಲುಗು ಚೆಟ್ಟಿಯಾರ್ ಸಂಘ, 1ನೇ "ಎ" ಅಡ್ಡರಸ್ತೆ, ಸುಧಾನಮಗರ, ಬೆಂಗಳೂರು** ಇಲ್ಲಿ ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಹಾಗೂ ಸ್ಥಳೀಯ ನಿವಾಸಿಗರಿಗೆ ಮತ್ತು ವಾರ್ಡ್‌ನ ನಿವಾಸಿಗರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ.ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

| ಹಾಜರಿದ್ದವರು | ಗೈರು ಹಾಜರಾತಿ |
|---|---|
| 1) ಉಪ ಆಯುಕ್ತರು (ದಕ್ಷಿಣ) ವಾರ್ಡ್-145 ನೋಡಲ್ ಅಧಿಕಾರಿ.<br>2) ವಾರ್ಡ್ 145 ಕ್ಕೆ ಸಂಬಂಧಪಟ್ಟಂತ AE, HI, SHI, Assessor, TI, Electrical, Traffic & Police Department.<br>3) Garbage Contractor.<br>4) ವಿಲ್ಸನ್ ಗಾರ್ಡನ್ ವೆಲ್‌ಫೇರ್ ಅಸೋಸಿಯೆಷನ್.<br>5) ಸುಧಾಮನಗರ ನಿವಾಸಿಗರು. | 1) Horticulture , Forest, BWSSB & BESCOM. |

**=**=**

## 1. BWSSB:-

- ಸುಧಾಮನಗರ ವ್ಯಾಪ್ತಿಯಲ್ಲಿ **BWSSB** ಇಲಾಖೆಗೆ ಸಂಬಂಧಪಟ್ಟಂತೆ ಸಮಸ್ಯೆಗಳು/ ಕುಂದುಕೊರತೆಗಳು ಹೆಚ್ಚಾಗಿ ಕಂಡುಬಂದಿರುತ್ತದೆ. (ಉದಾ : ಒಳಚರಂಡಿ ಸಮಸ್ಯೆ, ಅಣ್ಣಿಪುರ ರಸ್ತೆಯಲ್ಲಿ ಚೇಂಬರ್ ಕಟ್ಟಿಕೊಂಡಿರುತ್ತದೆ, **UGD** ಪೈಪ್‌ಗಳು ಬಹಳ ಹಳೆಯದಾಗಿದ್ದು ಹಾಗಾಗ್ಗೆ ಕಟ್ಟಿಕೊಳ್ಳುತ್ತಿರುವುದರಿಂದ ಪೈಪ್‌ಗಳನ್ನು ಬದಲಾಹಿಸಿಕೊಡುವಂತೆ ಕೋರಿರುತ್ತಾರೆ). ಸದರಿ ವಿಷಯದ ಬಗ್ಗೆ BWSSB ರವರನ್ನು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಯಿತ್ತು.
- **Storm Water** ಚರಂಡಿ ಸಮಸ್ಯೆಯಿಂದ ತುಂಬಾ ವಾಸನೆ ಬರುತ್ತಿದ್ದು ಅಕ್ಕಪಕ್ಕ ನಿವಾಸಿಗರ ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರುತ್ತಿರುವುದರ ಬಗ್ಗೆ ತಿಳಿಸಿರುತ್ತಾರೆ.

ಪು.ತಿ.ನೋ..

Scanned with CamScanner

- ಕುಡಿಯುವ ನೀರು ಬಹಳ ಕಲುಷಿತಗೊಂಡಿದ್ದು ಕುಡಿಯಲು ಉಪಯೋಗಿಸಲು ಸರಿಯಾದ ನೀರಿನ ವ್ಯವಸ್ಥೆ ಇಲ್ಲದೆ ಇಲ್ಲಿನ ನಿವಾಸಿಗರಿಗೆ ದಿನ ನಿತ್ಯದ ಬಳಕೆಗೆ ಬಹಳ ತೊಂದರೆಯಾಗುತ್ತಿದ್ದು, ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿರುವುದರ ಬಗ್ಗೆ ತಿಳಿಸಿರುತ್ತಾರೆ.
- ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಬಿ.ಬಿ.ಎಂ.ಪಿ ವತಿಯಿಂದ ವಾಟರ್ ಪ್ಲ್ಯಾಂಟ್ ಅಳವಡಿಸಿಕೊಡುವಂತೆ ಕೋರಿರುತ್ತಾರೆ.

2. <u>ವಿದ್ಯುತ್ ವಿಭಾಗ</u>:-

- 8ನೇ ಕ್ರಾಸ್, 9ನೇ ಕ್ರಾಸ್ ಸುಧಾಮಗನರ ವ್ಯಾಪ್ತಿಯಲ್ಲಿ ಬೀದಿ ದೀಪ ವ್ಯವಸ್ಥೆ ಸರಿಯಾಗಿಲ್ಲದಿರುವುದರಿಂದ ರಾತ್ರಿ ವೇಳೆಗಳಲ್ಲಿ ಸಂಚಾರಕ್ಕೆ ಅನಾನುಕೂಲವಾಗುತ್ತಿದ್ದು ಬೀದಿ ದೀಪ ಸರಿಪಡಿಸಿಕೊಡುವಂತೆ ತಿಳಿಸಿರುತ್ತಾರೆ.
- ವಿದ್ಯುತ್ ಇಲಾಖೆಯ ಸಂಬಂಧಪಟ್ಟ ಸಿಬ್ಬಂಧಿಯವರು ಕೂಡಲೇ ರಾತ್ರಿ ವೇಳೆ ರಸ್ತೆವಾರು ತಪಾಸಣೆ ನಡೆಸಿ ಬೀದಿ ದೀಪ ಚಾಲ್ತಿಯಲ್ಲಿರುವುದರ ಬಗ್ಗೆ ಹಾಗೂ ಬೀದಿ ದೀಪಗಳು ಹಾಳಾಗಿರುವ ಜಾಗದಲ್ಲಿ ಸರಿಪಡಿಸಲು ಮುಂದಿನ ಕ್ರಮವಹಿಸುವಂತೆ ಬಿ.ಬಿ.ಎಂ.ಪಿ ವಿದ್ಯುತ್ ವಿಭಾಗಕ್ಕೆ ಸೂಚಿಸಲಾಯಿತ್ತು.

3. <u>ಘನತ್ಯಾಜ್ಯ ನಿರ್ವಹಣೆ ವಿಭಾಗ</u>:-

- 7ನೇ, 8ನೇ, 9ನೇ ಕ್ರಾಸ್ ಮತ್ತು 2ನೇ ಮುಖ್ಯ ರಸ್ತೆ ಸುಧಾಮನಗರ ರಸ್ತೆಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಗಾಡಿ ಬರುತ್ತಿಲ್ಲದಿರುವುದರಿಂದ ತ್ಯಾಜ್ಯವನ್ನು ರಾತ್ರಿ ವೇಳೆಗಳಲ್ಲಿ ತಂದು ಬ್ರಿಡ್ಜ್ ಮೇಲೆ ಎಸೆಯುತ್ತಿದ್ದು ಹಾಗೂ ಬೆಂಕಿ ಹಚ್ಚುತ್ತಿರುವುದರಿಂದ ಸುತ್ತಮುತ್ತಲ್ಲಿನ ನಿವಾಸಿಗರಿಗೆ ಹಾಗೂ ವಾಹನ ಸಂಚಾರಸ್ಥರಿಗೆ ಅನಾನುಕೂಲವಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ಹಾಗೂ ಈ ವ್ಯಾಪ್ತಿಯಲ್ಲಿ ರಸ್ತೆ ಕಸ ಗುಡಿಸುವವರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು, ವಾರಕ್ಕೆ 2 ಬಾರಿ ಮಾತ್ರ ರಸ್ತೆ ಕಸ ಗುಡಿಸುವವರು ಬರುತ್ತಿದ್ದು ರಸ್ತೆಯಲ್ಲಿನ ಧೂಳು ಹಾಗೂ ಇತರೆ ಕಸದಿಂದ ನಿವಾಸಿಗರಿಗೆ ಬಹಳ ತೊಂದರೆಯಾಗುತ್ತಿದೆಯೆಂದು ತಿಳಿಸಿರುತ್ತಾರೆ.
- ವಿಲ್ಸನ್ ಗಾರ್ಡ್‌ನ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ನಿರ್ವಹಿಸುತ್ತಿಲ್ಲವೆಂದು ಶುಚಿ ಮಿತ್ರ ಸಂಘದವರು ತಿಳಿಸಿರುತ್ತಾರೆ.
- ವಿಲ್ಸನ್ ಗಾರ್ಡ್‌ನ್ ಸ್ಮಶಾನ ಸ್ವಚ್ಛಗೊಳಿಸುವುದರ ಬಗ್ಗೆ ಕ್ರಮವಹಿಸಲು ಕೋರಿರುತ್ತಾರೆ.

ಪು.ತಿ.ನೋ.,

Scanned with CamScanner

- ಲಕ್ಕಸಂದ್ರ ಬಳಿ ಇರುವಂತ ಸ್ಕೈ ವಾಕ್ ಸುತ್ತಮುತ್ತಲ್ಲಿನ ಜಾಗವನ್ನು ಸ್ವಚ್ಛಗೊಳಿಸುವಂತೆ ತಿಳಿಸಿರುತ್ತಾರೆ.
- ಶಾಂತಿನಗರ ಬಸ್ ನಿಲ್ದಾಣ ಡಬಲ್ ರೋಡ್ ಹಾಗೂ ಲಕ್ಕಸಂದ್ರ ಪಾರ್ಕ್ ಬಳಿ ಘನತ್ಯಾಜ್ಯವನ್ನು ಬೆಂಕಿ ಹಚ್ಚಿ ಸುಡುತ್ತಿರುವುದರಿಂದ ಅಕ್ಕಪಕ್ಕ ನಿವಾಸಿಗರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದು ಹಾಗೂ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಬಗ್ಗೆ ಕೂಡಲೇ ಸೂಕ್ತ ಪರಿಹಾರಕ್ಕೆ ಕ್ರಮವಹಿಸುವಂತೆ ಕೋರಿರುತ್ತಾರೆ. ಸದರಿ ವಿಷಯವನ್ನು SHI ಘನತ್ಯಾಜ್ಯರವರಿಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತ್ತು.

4. <u>ಕಾಮಗಾರಿ ವಿಭಾಗ</u>:-

- ಅಣ್ಣೆಪುರ ಮುಖ್ಯ ರಸ್ತೆ ಹಾಳಾಗಿದ್ದು ಸಂಚಾರಸ್ತರಿಗೆ ಬಹಳ ತೊಂದರೆಯಾಗುತ್ತಿದ್ದು ವಿಪರೀತ ದೂಳಿನಿಂದ ಕೂಡಿದ್ದು ನಿವಾಸಿಗರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದು ರಸ್ತೆ ರಿಪೇರಿ ಮಾಡಿಕೊಡುವಂತೆ ತಿಳಿಸಿರುತ್ತಾರೆ. ಕಾಮಗಾರಿ ವಿಭಾಗಕ್ಕೆ ತುರ್ತಾಗಿ ಕಾಮಗಾರಿ ಕೈಗೊಳ್ಳಲು ಸೂಚಿಸಲಾಯಿತ್ತು.
- ಕೀಯಾ ಮೋಟರ್ಸ್ ರಸ್ತೆಯ ಅಗಲೀಕರಣಕ್ಕೆ ಕ್ರಮವಹಿಸುವಂತೆ ಕೇಳಿರುತ್ತಾರೆ.

5. <u>ಟ್ರಾಫಿಕ್ ವಿಭಾಗ</u>:-

- 8ನೇ ಕ್ರಾಸ್ ಸುಧಾಮನಗರ ರಸ್ತೆಯಲ್ಲಿ 2 ಬದಿಗಳಲ್ಲಿ ಗಾಡಿಗಳನ್ನು ನಿಲ್ಲಿಸಿರುವುದರಿಂದ ಪಾದಚಾರಿಗಳಿಗೆ ಸಂಚರಿಸಲು ಹಾಗೂ ಇತರೆ ವಾಹನಗಳ ಸಂಚಾರಕ್ಕೂ ತೊಂದರೆಯಾಗುತ್ತಿದ್ದು ಅಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿರುತ್ತದೆ.
- 3ನೇ ಮತ್ತು 4ನೇ ಕ್ರಾಸ್ ಸುಧಾಮನಗರ ರಸ್ತೆಯಲ್ಲಿ ಹಳೆಯ ಗುಜರಿ ಸಾಮಾನುಗಳನ್ನು ತುಂಬಿಕೊಂಡು ಸಂಚಾರಸ್ಥರಿಗೆ ರಸ್ತೆಗಳಲ್ಲಿ ಓಡಾಡಲು ಕಷ್ಟವಾಗಿರುತ್ತದೆ.
- 3ನೇ ಕ್ರಾಸ್ ಸಿದ್ಧಯ್ಯ ರೋಡ್ ವ್ಯಾಪ್ತಿಯಲ್ಲಿ ಲಾರಿಗಳು ಸುಮಾರು ಮಧ್ಯ ರಾತ್ರಿ 3.00 ಗಂಟೆಯಿಂದ ಬೆಳಿಗ್ಗೆ 6.00 ಗಂಟೆ ವೇಳೆಯಲ್ಲಿ ಅನ್ ಲೋಡ್ ಕಾರ್ಯ ನಡೆಸುತ್ತಿರುವುದರಿಂದ ಅಕ್ಕಪಕ್ಕ ನಿವಾಸಿಗರಿಗೆ ಹಾಗೂ ವಿಧ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಟ್ರಾಫಿಕ್ ಪೋಲಿಸ್‌ರವರು ಕ್ರಮವಹಿಸುವಂತೆ ಸೂಚಿಸಲಾಯಿತ್ತು.

ಮು.ತಿ.ನೋ.

Scanned with CamScanner

6. **ಪೊಲೀಸ್ ಇಲಾಖೆ:-**

- 4ನೇ ಕ್ರಾಸ್ ಸುಧಾಮನಗರ ಪಾಸ್ ಪೋರ್ಟ್ ಆಫೀಸ್ ಕಡೆಯಲ್ಲಿ ವಾಹನಗಳಿಂದ ಪೆಟ್ರೋಲ್ ಕದಿಯುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ Police Land & Law Order ರವರಿಗೆ ಕ್ರಮ ಕೈಗೊಳ್ಳಲು ಸೂಚಿಸ

ಮುಂದುವರೆದಂತೆ, ಸಾರ್ವಜನಿಕರು ಕಸದ ಆಟೋಗಳು 2 ಶಿಫ್ಟ್ ಮುಖಾಂತರ ಕಸದ ಸಂಗ್ರಹಣೆ ಮಾಡಿದರೆ ಸುಧಾಮನಗರದಲ್ಲಿ ಸುಮಾರು ಶೇ.50 % ವಾಣಿಜ್ಯ ಭಾಗವಾದ ಅಂಗಡಿ ಮುಂಗಟ್ಟುಗಳು ಇದ್ದು 10 ರಿಂದ 11 ಗಂಟೆಯ ನಂತರ ಬಾಗಿಲು ತೆರೆಯುವುದರಿಂದ ತ್ಯಾಜ್ಯ ನೀಡಲು ಅನುಕೂಲವಾಗುತ್ತದೆ ಎಂದು ಸಲಹೆ ನೀಡಿರುತ್ತಾರೆ.

ಸುಧಾಮನಗರ ಹೆಚ್ಚು ವಸತಿಯೇತರ ಪ್ರದೇಶವಾಗಿದ್ದು ವ್ಯಾಪರಸ್ಥರು ಟ್ರೇಡ್ ಲೈಸೆನ್ಸ್ ನವೀಕರಣ ಹಾಗೂ ಹೊಸದಾಗಿ ಟ್ರೇಡ್ ಲೈಸೆನ್ಸ್ ಪಡೆಯಲು ಅನುಕೂಲವಾಗುವಂತೆ ಶಿಬಿರ ನಡೆಸಲು ಸಲಹೆ ನೀಡಿರುತ್ತಾರೆ. ಸದರಿ ವಿಷಯದ ಬಗ್ಗೆ ಆರೋಗ್ಯ ಇಲಾಖೆಯವರು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತ್ತು.

ತೆಲುಗು ಚೆಟ್ಟಿಯಾರ್ ಸಂಘ ಕಲ್ಯಾಣ ಮಂಟಪ ಸುತ್ತಮುತ್ತಲ್ಲಿನ ಖಾಲಿ ಜಾಗದಲ್ಲಿ ಮಾಂಸದ ತ್ಯಾಜ್ಯವನ್ನು ಎಸೆಯುತ್ತಿದ್ದು ಶುಭ ಸಮಾರಂಭ ವೇಳೆಗಳಲ್ಲಿ ಬಹಳ ತೊಂದರೆ ಆಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಆರೋಗ್ಯ ಇಲಾಖೆ SHI ರವರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತ್ತು.

ಸುಧಾಮನಗರ ನಿವಾಸಿಯಾದ ಶ್ರೀ.ರಾಜೇಂದ್ರ (ವಿಶೇಷಚೇತನರು) ರವರಿಗೆ ಜೀವನೋಪಾಯಕ್ಕೆ ಟೀ-ಅಂಗಡಿ ನಡೆಸಲು ಅನುವು ಮಾಡಿಕೊಡುವಂತೆ ಕೋರಿರುತ್ತಾರೆ.

**ಕಾರ್ಯದರ್ಶಿ ಹಾಗೂ**
**ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ - 145**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧ್ಯಕ್ಷರು ಹಾಗೂ**
**ನೋಡಲ್ ಅಧಿಕಾರಿ**
**ವಾರ್ಡ್ ಸಂಖ್ಯೆ - 145**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಅಪ್ಪಣೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಅವಗಾಹನೆಗೆ ತರಲು ಅಪ್ಪಣೆಗೆ ಕಳುಹಿಸಿದೆ.
3) ಮಾನ್ಯ ವಲಯ ಆಯುಕ್ತರುರವರ ಅವಗಾಹನೆಗೆ ತರಲು ಅಪ್ಪಣೆಗೆ ಕಳುಹಿಸಿದೆ.
4) ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಅವಗಾಹನೆಗೆ ತರಲು ಅಪ್ಪಣೆಗೆ ಕಳುಹಿಸಿದೆ.
5) ತಂಡದ ಎಲ್ಲಾ ಸಿಬ್ಬಂಧಿರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6) ಕಛೇರಿ ಕಡತಕ್ಕೆ.

Scanned with CamScanner